# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2290
ಉತ್ತರಿಸಬೇಕಾದ ದಿನಾಂಕ : 21.03.2022
ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ಸಚಿವರು : ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ | Reply |
|---|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ಜಾನಪದ ಕ್ರೀಡೆಯಾದ ಕಂಬಳದ ಬಗ್ಗೆ ಸರ್ಕಾರ ಗಮನಹರಿಸುತ್ತಿದೆಯೇ | ಹೌದು | Yes |
| ಆ) | ಕಂಬಳ ಕ್ರೀಡಾ ಕ್ಷೇತ್ರಕ್ಕೆ ಸರ್ಕಾರವು ಪ್ರೋತ್ಸಾಹ ಧನ ನೀಡುತ್ತಿದೆಯೇ; ನೀಡಿದ್ದಲ್ಲಿ, ಕಳೆದ 3 ವರ್ಷಗಳಲ್ಲಿ ಈ ಕ್ರೀಡೆಗೆ ಸರ್ಕಾರದಿಂದ ಬಿಡುಗಡೆಯಾದ ಮೊತ್ತವೆಷ್ಟು; | ಹೌದು;<br><br>2019-20ನೇ ಸಾಲಿನಲ್ಲಿ ರೂ.5.00 ಲಕ್ಷ ನೀಡಲಾಗಿದ್ದು,<br>2021-22ನೇ ಸಾಲಿನಲ್ಲಿ ರೂ.5 ಲಕ್ಷ ಪ್ರೋತ್ಸಾಹಧನ ಮಂಜೂರು ಮಾಡಲಾಗಿದೆ. | Yes;<br><br>Rs.5.00 Lakh has been given during 2019-20 and Rs.5.00 Lakh , has been sanctioned during 2021-22 Kambala. |
| ಇ) | ಕ್ರೀಡಾ ಕ್ಷೇತ್ರದಲ್ಲಿ ಕಂಬಳಕ್ಕೆ ಸರ್ಕಾರದಿಂದ ಬೇರೆ ಯಾವ ಯಾವ ಸೌಲಭ್ಯ ನೀಡಲಾಗುತ್ತಿದೆ; | ಜಾನಪದ ಕ್ರೀಡಾ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಸಾಧಕ ಕ್ರೀಡಾಪಟುಗಳಿಗೆ ರೂ.1.00 ಲಕ್ಷ ನಗದು ಪುರಸ್ಕಾರ ಮತ್ತು ಸ್ಮರಣಿಕೆಗಳನ್ನೊಳಗೊಂಡ 'ಕರ್ನಾಟಕ ಕ್ರೀಡಾ ರತ್ನ' ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಕಂಬಳ ಕ್ರೀಡೆಯಲ್ಲಿ ಕೋಣ ಗಳನ್ನು ಓಡಿಸುವ ಓಟಗಾರರಲ್ಲಿ ಅತ್ಯುತ್ತಮ ಸಾಧನೆ ಮಾಡಿದ 10 ಓಟಗಾರರಿಗೆ 'ಕರ್ನಾಟಕ ಕ್ರೀಡಾ ರತ್ನ' ಪ್ರಶಸ್ತಿಯನ್ನು ನೀಡಲಾಗಿದೆ.<br><br>ಕ್ರೀಡಾ ಕ್ಷೇತ್ರದ ಬೆಳವಣಿಗೆಗೆ ಗಣನೀಯ ಕೊಡುಗೆ ನೀಡಿರುವ ಸಂಸ್ಥೆಗಳನ್ನು ಗುರುತಿಸಿ, ರೂ 5.00 ಲಕ್ಷ ನಗದು ಪುರಸ್ಕಾರ ಮತ್ತು ಸ್ಮರಣಿಕೆಯನ್ನು ಒಳಗೊಂಡ 'ಕ್ರೀಡಾ ಪೋಷಕ' ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಕಂಬಳ ಕ್ರೀಡೆಯ ಬೆಳವಣಿಗೆಗೆ ಗಣನೀಯ ಕೊಡುಗೆ ನೀಡಿರುವ ಕಂಬಳ ಸಂರಕ್ಷಣೆ, ನಿರ್ವಹಣೆ ಮತ್ತು ತರಬೇತಿ ಅಕಾಡೆಮಿ (ರಿ), ಕಾರ್ಕಳ, ಉಡುಪಿ ಜಿಲ್ಲೆ ಈ ಸಂಸ್ಥೆಗೆ 2017-18 ನೇ ಸಾಲಿನಲ್ಲಿ 'ಕ್ರೀಡಾ ಪೋಷಕ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಕಂಬಳದ ಸಂಘಟನೆಗೆ ಪ್ರಕರಣವಾರು ಪರಿಶೀಲಿಸಿ, ಅನುದಾನ ನೀಡಲಾಗುತ್ತಿದೆ. | The 'Karnataka KreedaRatna' award consisting of Rs 1.00 lakh cash award and memento is being given to the each best performing sportspersons in the field of folk sports. The 'Karnataka Kreeda Ratna' award has been given to the 10 best performers among the runners who drive bulls in Kambala sports.<br><br>In recognition of the institutions that have contributed substantially to the growth of the sports sector, a "Karnataka Kreeda poshaka award consisting of Rs 5.00 lakh each cash award and memento is being awarded. Kambala Conservation, Management and Training Academy (R), Karkala, Udupi District, which has contributed substantially to the growth of Kambala sports, has been honoured with the 'kreeda poshka'award during 2017-18.<br><br>A case-wise review and grant is being given to the Kambala Organisation. |

| | | | |
|---|---|---|---|
| ಈ) | ಜಾನಪದ ಕ್ರೀಡೆ ಕಂಬಳ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರದ ಕೊಡುಗೆ ಏನು? | ಕಂಬಳ ಕ್ರೀಡೆಯ ನಿರಂತರ ಚಟುವಟಿಕೆ ಮತ್ತು ಕೋಣಗಳ ಓಟದ ತರಬೇತಿಯ ಹಿನ್ನೆಲೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದ್ರೆಯ 'ವೀರರಾಣಿ ಅಬ್ಬಕ್ಕ ಸಂಸ್ಕೃತಿ ಗ್ರಾಮ'ದಲ್ಲಿ 10 ಎಕರೆ ಜಾಗದಲ್ಲಿ 'ಕೋಟಿ-ಚೆನ್ನಯ್ಯ' ಹೆಸರಿನ ಜೋಡುಕರೆಯನ್ನು ನಿರ್ಮಾಣ ಮಾಡಲಾಗಿದ್ದು, ವೀಕ್ಷಕರ ಗ್ಯಾಲರಿ ಮತ್ತಿತರ ಅಗತ್ಯ ಮೂಲ ಸೌಕರ್ಯಗಳೊಂದಿಗೆ ಕಂಬಳ ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ. ಅದೇ ರೀತಿ, ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಮಿಯ್ಯಾರಿನಲ್ಲಿ 5 ಎಕರೆ ನಿವೇಶನದಲ್ಲಿ 'ಲವ-ಕುಶ' ಹೆಸರಿನ ಕಂಬಳ ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ. ಪ್ರತಿ ವರ್ಷ ಈ ಕಂಬಳ ಕ್ರೀಡಾಂಗಣಗಳಲ್ಲಿ ಯಶಸ್ವಿಯಾಗಿ ಕಂಬಳವನ್ನು ಆಯೋಜಿಸಲಾಗುತ್ತಿದೆ. | In view of the continuous activity of Kambala sports and training of bulls a 10 acre land at Veera rani Abbakka Culture Village in Moodubidre in Dakshina Kannada district has been constructed 'Koti-Chennayya' kambala stadium with viewers' gallery and other necessary infrastructure. Similarly, at Miyaru in Karkala taluk of Udupi district 'Lava-Kusha' Kambala Stadium has been constructed on a 5 acre land. Kambala is successfully organized in these Kambala stadiums every year. |

**ವೈಎಸ್‌ಡಿ/ಇಬಿಬಿ/68/2022**

**(ಡಾ. ನಾರಾಯಣಗೌಡ)**
ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಸಚಿವರು.